



ಅವಯವಗಳು, 4 ಡಿಗ್ರಿ ಸೆಲ್ಸಿಯಸ್ ತಾಪಮಾನ... ಸೌಂದರ್ಯ, ರೌದ್ರತೆಯನ್ನು ಅಡಗಿಸಿಟ್ಟುಕೊಂಡ ಹಿಮಚ್ಛಾದಿತ ಬೆಟ್ಟಗಳನ್ನು ನೋಡುತ್ತಿದ್ದರೆ ತಂತಾನೇ ಮೈಪುಳಕಗೊಳ್ಳುತ್ತಿತ್ತು.

ಹಿಮಪರ್ವತಗಳ ನಡುವಿನ ನಮ್ಮ ಪಯಣದುದ್ದಕ್ಕೂ ಜೊತೆಯಾದದ್ದು ಕಾಳಿಗಂಡಕಿ ನದಿ. ಬೆಟ್ಟಗಳ ತಪ್ಪಲಲ್ಲಿ ತಣ್ಣಗೆ ಹರಿಯುವ ಗಂಡಕಿ, ಪ್ರಕೃತಿಯ ಚೆಲುವಿಗೆ ಸಾಟಿಯೆಂಬಂತೆ ಕಾಣುತ್ತಿದ್ದಳು. ಅನ್ನಪೂರ್ಣ ಪರ್ವತ ಶ್ರೇಣಿಯ ಮೇಲೆ ಹಾಸುಹೊದ್ದ ಹಿಮರಾಶಿಯ ಚೆಲುವು ವರ್ಣನೆಗೆ ನಿಲುಕದ್ದು. ಲೌಕಿಕ ಚೆಲುವಿನೊಂದಿಗೆ ಅಲೌಕಿಕತೆಯನ್ನು ಸುಪ್ತವಾಗಿಟ್ಟುಕೊಂಡಿರುವ ಹಿಮಶ್ರೇಣಿಗಳು ಮನಸ್ಸನ್ನು ಹಿಡಿದಿಟ್ಟಂತೆ ಅನಿಸುತ್ತಿದ್ದವು.

ದಾರಿಯುದ್ದಕ್ಕೂ ಕಂಡ ಸೇಬು, ಮರಸೇಬು ತೋಟಗಳು, ಅವುಗಳನ್ನು ನಿರ್ವಹಿಸುವ ಸಹಕಾರ ತತ್ವದ ಬೇಸಾಯ ಸಂಘಗಳು ಅಲ್ಲಿನ ಕೃಷಿ ಜೀವನದ ಪರಿಚಯದಂತಿದ್ದವು. ನಡುನಡುವೆ ಕಾಣಸಿಗುವ, ಸಾಕಿದ ಯಾಕ್‌ಗಳು ನೇಪಾಳದ ಜನಜೀವನಕ್ಕೆ ಸಾಕ್ಷಿಯಂತೆ ಕಾಣುತ್ತಿದ್ದವು. ಇಲ್ಲಿ ಬಹುತೇಕರು ಹಾಲು, ತುಪ್ಪಗಳಿಗೆ ಯಾಕ್‌ಗಳನ್ನೇ ಅವಲಂಬಿಸಿದ್ದಾರೆ.

ಪ್ರವಾಸದ ಪ್ಯಾಕೇಜಿನಲ್ಲಿ ಎರಡೂ ಬದಿಯ ಪ್ರಯಾಣ, ದರ್ಶನದ ನಂತರ ರಾತ್ರಿ ಊಟ, ವಸತಿ ಮತ್ತು ಬೆಳಗ್ಗಿನ ತಿಂಡಿ ಸೇರಿರುತ್ತದೆ. ಮುಕ್ತಿನಾಥನ ಮೆಟ್ಟಿಲುಗಳನ್ನು ಏರಲು ಕುದುರೆಗೆ 300 ರೂಪಾಯಿ. ಕೇದಾರ ಗಂಗೋತ್ರಿಗಳಷ್ಟೇನೂ ತ್ರಾಸವಲ್ಲದ, ಆದರೆ ಪ್ರಯಾಸದ ಪ್ರವಾಸ ಎಂದೂ ಹೇಳಬಹುದು.

ನಾರಾಯಣನೆಂದು ನಾವು ಕರೆದರೂ ಇಲ್ಲಿನ ದೇವನನ್ನು ಬುದ್ಧನೆಂದು ಭಾವಿಸುವವರೂ ಇದ್ದಾರಾದ್ದರಿಂದ ಬೌದ್ಧರೂ ಈ ಕ್ಷೇತ್ರಕ್ಕೆ ಹಕ್ಕುದಾರರು. ಹಾಗಾಗಿ ಇದನ್ನೊಂದು ಅಂತರ್ಧರ್ಮೀಯ ಪ್ರದೇಶವೆನ್ನಬಹುದು.

ಇಲ್ಲಿನ ಎಲ್ಲ ಪ್ರವಾಸೀ ಸಂಸ್ಥೆಗಳ ಸಿಪಿ, ಎಂಎಪಿ ಪ್ಯಾಕೇಜುಗಳು ನೇಪಾಳಿ ಭೋಜನ ಶೈಲಿಯನ್ನು ಅನುಸರಿಸುವುದರಿಂದ ನಮಗೆ, ಅದರಲ್ಲೂ ದಕ್ಷಿಣ ಭಾರತೀಯ ಸಸ್ಯಾಹಾರಿಗಳಿಗೆ ಹೊಟ್ಟೆ ಕೆಡುವುದೋ, ಉಪವಾಸ ಬೀಳುವುದೋ ಅನಿವಾರ್ಯ. ವಿಪರೀತ ಚಳಿಯಿಂದ ದೋಸೆ, ಇಡ್ಲಿಗಳು ಹುದುಗದೇ ರುಚಿಸುವುದಿಲ್ಲವಲ್ಲ!

ಗೂರ್ಖಾ ಮ್ಯೂಸಿಯಂ, ಹಿಮಾಲಯದ ಹಿಮ ಕರಗಿ ನದಿಯಾಗಿ ಪಾತಾಳದಲ್ಲಿ ಹರಿಯುವ ಸ್ಥಳ ಮನಸ್ಸಿಗೆ ಖುಷಿ ತಂದುಕೊಟ್ಟವು. ದೇವಿ ಫಾಲ್ಸ್, ಮಹೇಂದ್ರ ಗುಹೆ, ಗುಪ್ತೇಶ್ವರ, ವಿಂಧ್ಯಾಭಾಷಿಣಿ ತಾಣಗಳು ತಮ್ಮದೇ ಮಾಂತ್ರಿಕ ಚೆಲುವಿಂದ ಮನಸೆಳೆದಿದ್ದವು. ಸಂಜೆ ಫೆವಾ ಸರೋವರದ ದೋಣಿ

ಪೋಖರಾದಲ್ಲಿನ ನಯನ ಮನೋಹರ 'ದೇವಿ ಫಾಲ್ಸ್'